ಇದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಇಂದು ಬೆಂಗಳೂರಿನಲ್ಲಿ ಡೈರಿ ಕಾರ್ಪೊರೇಷನ್ ಮಾರಾಟ ಮಾಡತಕ್ಕ ಹಾಲಿನ ದರವನ್ನು ಬೊಂಬಾಯಿ ಜೊತೆಗೆ ಅಥವಾ ಬೇರೆ ಕಡೆಗೆ ತುಲನೆ ಮಾಡಿ ನೋಡಿದರೆ, ಅಷ್ಟು ಹೆಚ್ಚಿಲ್ಲ. ಕೇವಲ ದಿಲ್ಲಿಯಲ್ಲಿ ಸ್ವಲ್ಪ ಕಡಿಮೆ ದರ ಇದೆ. ಆದರೂ ನಾಗರೀಕರ ಅತ್ಯಂತ ಆಗ್ರಹದ ಬೇಡಿಕೆಯನ್ನು ನಾವು ಗಮನದಲ್ಲಿಟ್ಟುಕೊಂಡು, ಬರುವ ತಿಂಗಳ ಒಂದನೇ ತಾರೀಖಿನಿಂದ ಒಂದು ಲೀಟರ್‌ಗೆ 10 ಪೈಸೆಗಳನ್ನು ಕಡಿಮೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ.

ವಿಷಯ : ಧಾರವಾಡ ಜಿಲ್ಲೆ ಕೋಣ್ ತಾಲ್ಲೂಕ್, ನರೇಗಲ್ಲ ಶ್ರೀ ಅನ್ನದಾನೇಶ್ವರ ವಾಣಿಜ್ಯ ಕಾಲೇಜಿಗೆ ಸಿಬ್ಬಂದಿ ನೇಮಕ

ಪ್ರಶ್ನೆ : 27 (200) ಶ್ರೀಜ್ಞಾನದೇವ ದೊಡ್ಡಮೇಟಿ.— (ಕೋಣ್) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆ ಕೋಣ ತಾಲ್ಲೂಕು ನರೇಗಲ್ಲ ಶ್ರೀ ಅನ್ನದಾನೇಶ್ವರ ವಾಣಿಜ್ಯ ಕಾಲೇಜಿಗೆ ಸಿಬ್ಬಂದಿ ನೇಮಕ ಮಾಡುವಾಗ (ಅಧ್ಯಾಪಕರ) ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಇದೇ ಕಾಲೇಜಿನ ವಾಣಿಜ್ಯ ವಿಭಾಗಕ್ಕೆ ಎರಡು ಅಧ್ಯಾಪಕರ ಹುದ್ದೆಗಳಿಗೆ ನೇಮಕಾತಿಯ ಸಲುವಾಗಿ ಅರ್ಜಿ ಕರೆದು ಮೂರು ಜನರನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಇ) ಈಗ ಆಗಿರುವ ಅಕ್ರಮಗಳ ಕುರಿತು ಸಂಬಂಧ ಪಟ್ಟವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಉತ್ತರ :— ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ಬಂದಿದೆ.

ಆ) ಹೌದು. ಶ್ರೀ ಅನ್ನದಾನೇಶ್ವರ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಾಣಿಜ್ಯ ವಿಭಾಗವು 1978ನೇ ಇಸವಿಯಲ್ಲಿ ಒಂದು ಹೊಸ ವಿಭಾಗವಾಗಿ ಪ್ರಾರಂಭವಾಗಿರುವುದರಿಂದ ಮತ್ತು ಅದು ಅನುದಾನ ಪಡೆಯುವುದಕ್ಕೆ ಪೂರ್ವವಾದುದರಿಂದ, ಆಡಳಿತ ಮಂಡಳಿಯವರು ಹೊಸ ವಿಭಾಗಕ್ಕೆ ನೇಮಕಾತಿ ಮಾಡುವುದರಲ್ಲಿ ಪೂರ್ಣ ಸ್ವತಂತ್ರರಾಗಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಜೆ.ಎಸ್. ದೊಡ್ಡಮೇಟಿ.— ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ ಎಂಬ ನನ್ನ ಪ್ರಶ್ನೆಗೆ ಹೌದು ಅಂತ ಉತ್ತರ ಹೇಳಿದ್ದಾರೆ. ಆದರೆ ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ. ರಾಚಯ್ಯ.— ಹಿಂದುಳಿದ ವರ್ಗದವರಿಗೆ ಈಗ ಆಗಿರತಕ್ಕಂತಹ ಅನ್ಯಾಯವನ್ನು ಮುಂದೆ ಆಗತಕ್ಕಂತಹ ನೇಮಕಾತಿಗಳಲ್ಲಿ ಸರಿಪಡಿಸಲಾಗುವುದು ಅಂತ ತಿಳಿಸುತ್ತೇನೆ.

ಶ್ರೀ ಜೆ ಎಸ್. ದೊಡ್ಡಮೇಟಿ.— ಈಗ ಒಂದು ವರ್ಷವಾಯಿತು. ಆಲ್ಲಿ ಹಿಂದುಳಿದ ವರ್ಗದ ಯಾರೊಬ್ಬರನ್ನೂ ನೇಮಕಾತಿ ಮಾಡಿಕೊಂಡಿಲ್ಲ. ಈ ಕುರಿತು ಸರ್ಕಾರ ಏನು ಕ್ರಮ ಕೈಗೊಂಡಿದೆ? ಕಳೆದ ಒಂದು ವರ್ಷದಿಂದಲೂ ಹಾಗೇ ನಡೆದಿದೆ

ಶ್ರೀ ಬಿ. ರಾಚಯ್ಯ.— 5 ವರ್ಷದ ನಂತರ ನಾವು ತೆಗೆದುಕೊಂಡ ಮೇಲೆ ಈ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರುವುದಕ್ಕಾಗುತ್ತದೆ. ಅಲ್ಲಿಯವರೆವಿಗೂ ಅವರಿಗೆ ಅವಕಾಶ ಇದೆ. ಅದರಂತೆ ಅವರು ಮಾನವಿ ಮಾಡಿಕೊಂಡಿದ್ದಾರೆ

ಶ್ರೀ ಜೆ. ಎಸ್. ದೊಡ್ಡಮೇಟಿ.— ಅನ್ಯಾಯವಾಗಿದೆ ಎಂದು ಕಂಡು ಬಂದಿದ್ದರೂ ಅಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ. 5ವರ್ಷ ಆದ ಮೇಲೆ ಗ್ರಾಂಟ್-ಇನ್-ಏಡ್ ಅನ್ನು ಸರ್ಕಾರ ಕೊಡುತ್ತದೆ ಆ ರೀತಿ ಗ್ರಾಂಟ್-ಇನ್ ಏಡ್ ಅನ್ನು ಕೊಟ್ಟ ಮೇಲೆ ಸರ್ಕಾರದ ಆಜ್ಞೆ ಏನಿದೆ, ರೋಸ್ಟರ್ ಪದ್ಧತಿ ಏನಿದೆ ಅದನ್ನು ಅನುಸರಿಸಿದರೇ ಅವರಿಗೆ ಗ್ರಾಂಟ್ ಕೊಡುವುದು. ಇಲ್ಲದಿದ್ದರೆ ಸರ್ಕಾರ ಗ್ರಾಂಟ್ ಕೊಡುವುದಿಲ್ಲ.

ಶ್ರೀ ಜೆ.ಎಸ್. ದೊಡ್ಡಮೇಟಿ.— ಇದು ಒಂದೇ ಕಾಲೇಜಿಗೆ ಸಂಬಂಧಪಟ್ಟದ್ದಲ್ಲ. ಇದೇ ರೀತಿ ಎಲ್ಲಾ ಕಾಲೇಜುಗಳಲ್ಲೂ ಇದೆ.

ಅಧ್ಯಕ್ಷರು.— ಗ್ರಾಂಟ್-ಇನ್-ಏಡ್‌ನ ವ್ಯಾಪ್ತಿಯೊಳಗೆ ಬರುವವರೆಗೆ ಅವರನ್ನು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ ಅಂತ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಜೆ. ಎಸ್ ದೊಡ್ಡಮೇಟಿ —5ವರ್ಷದವರೆಗೆ ಅವರು ಸ್ವತಂತ್ರವಾಗಿದ್ದಾರೆಂದು ತಿಳಿದುಕೊಂಡು ತಮ್ಮ ಮಕ್ಕಳು, ಮರಿಗಳನ್ನು ಸೇರಿಸಿಕೊಂಡರೆ ಹೇಗೆ? ಇದನ್ನು ತಡೆ ಹಿಡಿಯುವುದಕ್ಕೆ ಸರ್ಕಾರದವರು ಯಾವುದಾದರೊಂದು ಕಾನೂನನ್ನು ತರುತ್ತಾರೆಯೇ?

ಶ್ರೀ ಬಿ. ರಾಚಯ್ಯ.— ಹೊಸದಾಗಿ ನಿಯಮಗಳನ್ನು ಮಾಡುವಾಗ ಅದನ್ನು ಅನುಸರಿಸುತ್ತೇವೆ.